# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.236-2019** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಎಂ.ಡಿ.ಜಯಶ್ರೀ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 10-02-2023. |

**ಪಾಟೀ ಸವಾಲುಃ ಶ್ರೀ ಕುಮಾರ್ ವಕೀಲರಿಂದಃ**

ನಾನು ಸುಮಾರು 12-13 ವರ್ಷಗಳಿಂದ ನಂಜನಗೂಡಿನಲ್ಲಿ ವಾಸವಿರುತ್ತೇನೆ. ಈಗ ನನ್ನೊಂದಿಗೆ ನನ್ನ ಮಕ್ಕಳು ವಾಸವಿರುವುದಿಲ್ಲ. ನಾನೊಬ್ಬಳೆ ವಾಸವಿರುತ್ತೇನೆ. ನನ್ನ ಪತಿಯವರನ್ನು ಹೊರತುಪಡಿಸಿ, ನನ್ನ ಪತಿಯವರ ಉಳಿದ ಎಲ್ಲಾ ಸಹೋದರರು ಜೀವಂತ ಇರುತ್ತಾರೆ. ನಾನು ಮತ್ತು ನನ್ನ ಭಾವಂದಿರುಗಳು ಚೆನ್ನಾಗಿ ಇರುತ್ತೇವೆ. ನಾನು ಪ್ರತಿವಾದಿ ವಿರುದ್ಧ ಈ ದಾವಾವನ್ನು ಸಲ್ಲಿಸಿರುವ ವಿಚಾರ ನನ್ನ ಭಾವಂದಿರುಗಳಿಗೆ ತಿಳಿದಿರುತ್ತದೆ. ದಾವಾ ಸ್ವತ್ತಿನ ಮೂಲ ದಾಖಲೆಯೂ ನನ್ನ ಭಾವನಾದ ಈರನಾಯ್ಕ ರವರ ಬಳಿ ಇರುತ್ತದೆ. ಸದರಿ ದಾಖಲೆಯನ್ನು ಅವರಿಂದ ಪಡೆದು ನ್ಯಾಯಾಲಯಕ್ಕೆ ಸಲ್ಲಿಸಲು ತೊಂದರೆ ಇರುವುದಿಲ್ಲವೇ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಅವರನ್ನು ಹಲವಾರುಭಾರಿ ಕೇಳಿದ್ದು ಅವರು ಇಲ್ಲ ಎಂದು ಹೇಳಿದ್ದು, ನಾನು ಮತ್ತೊಮ್ಮೆ ಅವರನ್ನು ಸದರಿ ದಾಖಲೆಯನ್ನು ಕೇಳವುದಾಗಿ, ಅವರು ಕೊಟ್ಟ ಪಕ್ಷದಲ್ಲಿ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಲು ಸಿದ್ಧಳಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಉಳಿದ ಎಲ್ಲಾ ಭಾವಂದಿರುಗಳೆಲ್ಲಾ ದಾವಾ ಸ್ವತ್ತಿನ ಮೂಲ ದಾಖಲೆ ಈರನಾಯ್ಕ ರವರ ಬಳಿ ಇರಬಹುದು ಎಂದು ತಿಳಿಸಿರುತ್ತಾರೆ.

2. ದಾವಾ ಸ್ವತ್ತಿನ ಪೂರ್ವಕ್ಕೆ ಇರುವ ಸ್ವತ್ತನ್ನು ಪ್ರತಿವಾದಿ ಅವರ ಪೂರ್ವ ಮಾಲೀಕರಿಂದ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ. ಪ್ರತಿವಾದಿ ಕ್ರಯಕ್ಕೆ ಪಡೆದ ಸ್ವತ್ತಿನ ಪೂರ್ವಕ್ಕೆಃ- ರಮೇಶ್ ರವರ ಮನೆ, ಪಶ್ಚಿಮಕ್ಕೆಃ-ದಾವಾ ಸ್ವತ್ತು, ಉತ್ತರಕ್ಕೆಃ-ಗಲ್ಲಿ ನಂತರ ಸುವರ್ಣಮ್ಮ, ದಕ್ಷಿಣಕ್ಕೆಃ- ಲಿಂಗಾಯಿತರಿಗೆ ಸೇರಿದ ಸ್ವತ್ತು ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ವಿಭಾಗವಾಗಿದ್ದು ಪೂರ್ವಕ್ಕೆ ನನ್ನ ಭಾವ ಈರನಾಯ್ಕ ರವರಿಗೆ ಸೇರಿದ ಸ್ವತ್ತು, ಅದರ ನಂತರ ನನಗೆ ಸೇರಿದ ಸ್ವತ್ತು,

ಅದರ ಪಶ್ಚಿಮಕ್ಕೆ ನನ್ನ ಮೈದುನ ಮಾಲಿಂಗನಾಯ್ಕನಿಗೆ ಸೇರಿದ ಸ್ವತ್ತು ಇರುತ್ತದೆ. ಎಷ್ಟು ಅಡಿ ಗಲ್ಲಿ ಬಿಡಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ, ಪ್ರತಿವಾದಿ ಮತ್ತು ನನ್ನ ಮೈದುನ ಮಾಲಿಂಗನಾಯ್ಕ ರವರಿಗೆ ಸೇರಿದ ಸ್ವತ್ತಿನ ಉತ್ತರ ಪಾರ್ಶ್ವಕ್ಕೆ ಇರುವ ಸುವರ್ಣಮ್ಮ ನವರ ಸಹ ಅವರ ಮನೆಯ ದಕ್ಷಿಣಕ್ಕೆ ಬಿಟ್ಟಿರುತ್ತಾರೆ ಎಂದರೆ ಸರಿ. ಗಲ್ಲಿಯೂ ಎಷ್ಟು ಅಡಿಗಳು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ ಅವರ ಪೂರ್ವ ಮಾಲೀಕರಿಂದ ಪಡೆದ ಸ್ವತ್ತಿನ ಪೂರ್ವಕ್ಕೆ ಎಷ್ಟು ಅಡಿ ಗಲ್ಲಿ ಇರುತ್ತದ ಎಂದು ನನಗೆ ಗೊತ್ತಿಲ್ಲ. ಮಾಲಿಂಗನಾಯ್ಕರ ಸ್ವತ್ತಿನ ಪಶ್ಚಿಮಕ್ಕೆ ಎಷ್ಟು ಅಡಿ ಜಾಗವನ್ನು ಬಿಡಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯ ಮನೆಯ ಪೂರ್ವಕ್ಕೆ ಇರುವ ಗಲ್ಲಿಗೆ ಸಂಬಂಧಿಸಿದಂತೆ ಪ್ರತಿವಾದಿ ಮತ್ತು ಅವರ ಬಾಜುದಾರರಾದ ರಮೇಶ್ ರವರಿಗೆ ಹಕ್ಕು ಇರುತ್ತದೆ ಎಂದರೆ ಸರಿ. ಪ್ರತಿವಾದಿಯ ಮನೆಯ ಪೂರ್ವಕ್ಕ ಇರುವ ಗಲ್ಲಿಗೆ ಸಂಬಂಧಿಸಿದಂತೆ ಪ್ರತಿವಾದಿ ಮತ್ತು ಅವರ ಬಾಜುದಾರರಾದ ರಮೇಶ್ ರವರನ್ನು ಹೊರತುಪಡಿಸಿ ಬೇರೆ ಯಾರಿಗೂ ಹಕ್ಕು ಇರುವುದಿಲ್ಲ ಎಂದರೆ ಸರಿ.

( ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

**ಓ . ಹೇ. ಕೇ. ಸರಿ. ಇದೆ**

**ಸಹಿ/ –**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**